
# ನಿಮ್ಮ ಶರೀರದ ಶ್ರಮಿಕ ಅಂಗವನ್ನು ಜೋಪಾನಮಾಡುವುದಕ್ಕಾಗಿ...

**ಜಠರ–ಕರುಳುಗಳಶಾಸ್ತ್ರ**



ಮಾನವ ಶರೀರದಲ್ಲಿ ಯಕೃತ್(ಪಿತ್ತಜನಕಾಂಗ/ಲಿವರ್) ಎಂಬುದು ದೊಡ್ಡ ಹಾಗೂ ಅತ್ಯಂತ ಪ್ರಮುಖ ಅಂಗಗಳಲ್ಲಿ ಒಂದು. ಬದಲಾಗುತ್ತಿರುವ ಜೀವನಶೈಲಿ ಹಾಗೂ ಆಹಾರ ಸೇವನಾ ಹವ್ಯಾಸಗಳಿಂದ, ಯಕೃತ್‌ಗೆ ಸಂಬಂಧಿಸಿದ ರೋಗಗಳು ಹೆಚ್ಚುತ್ತಿರುವ ಈ ಸಂದರ್ಭದಲ್ಲೂ, ಅದು ಜೀವಕ್ಕೆ ಅಗತ್ಯವಾದ ಹಾಗೂ ಸಂಕೀರ್ಣ ಕೆಲಸಗಳನ್ನು ನಿಭಾಯಿಸುವ ಮೂಲಕ ನಮ್ಮ ಸಹಜ ಮತ್ತು ಆರೋಗ್ಯಪೂರ್ಣ ಬದುಕಿಗೆ ಅವಕಾಶಮಾಡಿಕೊಡುತ್ತದೆ. ಈ ರೋಗಗಳು ಯಾವುದೇ ಗುಣಲಕ್ಷಣಗಳನ್ನು ಬಹಿರಂಗವಾಗಿ ತೋರ್ಪಡಿಸದೇ ನಿಶ್ಶಬ್ದವಾಗಿ ಆಕ್ರಮಿಸುತ್ತದೆ ಕೊನೆಯ ಕ್ಷಣದವರೆಗೂ ನಿಮ್ಮ ಶರೀರ ಇದರ ಗುಣಲಕ್ಷಣಗಳನ್ನು ಬಹಿರಂಗಗೊಳಿಸುವುದಿಲ್ಲ. ಆದರೆ, ಒಂದೊಮ್ಮೆ ಇದು ಆರಂಭಿಕ ಹಂತದಲ್ಲೇ ಪತ್ತೆಯಾದಲ್ಲಿ ಮತ್ತು ಅದನ್ನು ಸಮರ್ಪಕವಾಗಿ ನಿರ್ವಹಿಸಿದಲ್ಲಿ ಯಕೃತ್‌ನ ರೋಗದ ವಿಷಯದಲ್ಲಿ ಉತ್ತಮ ಫಲಿತಾಂಶ ನಿರೀಕ್ಷಿಸಬಹುದು. ಅಂದ ಹಾಗೆ ಈ ವಿಷಯವಾಗಿ ಅಂದರೆ ನಿಮ್ಮ ಶರೀರದ ಶ್ರಮಿಕ(ಗರಿಷ್ಠ ಪ್ರಮಾಣದ ಕಷ್ಟದ ಕೆಲಸಗಳನ್ನು ಮಾಡುವ) ಅಂಗದ ಕುರಿತಾದ ಕೆಲವು ಪ್ರಶ್ನೆಗಳಿಗೆ ಇಲ್ಲಿ ಬೆಂಗಳೂರಿನ ವಿಕ್ರಮ್ ಆಸ್ಪತ್ರೆಯ ಯಕೃತ್ ತಜ್ಞ ವೈದ್ಯರು ಉತ್ತರಿಸಿದ್ದಾರೆ.

## ಯಕೃತ್ ಅನಾರೋಗ್ಯಕ್ಕೆ ಕಾರಣಗಳೇನು?

ಜನ್ಮಜಾತ(ಹುಟ್ಟಿನಿಂದ ಬಂದ ಚಯಾಪಚಯದ ಸಮಸ್ಯೆಗಳು), ವೈರಾಣು ಸೋಂಕು (ಹೆಪಟೈಟಿಸ್ ಬಿ ಮತ್ತು ಹೆಪಟೈಟಿಸ್ ಸಿ), ಅತಿಯಾದ ಮದ್ಯಸೇವನೆಯಿಂದ ಶರೀರದೊಳಕ್ಕೆ ಸೇರುವ ವಿಷಗಳು, ಕೊಬ್ಬಿದ ಯಕೃತ್ (ನಿಯಮಿತವಾದ ಶಾರೀರಿಕ ವ್ಯಾಯಮಾವಿಲ್ಲದೇ, ಆಹಾರ ಸೇವನಾ ಕ್ರಮದಲ್ಲಿ ಉಂಟಾದ ವ್ಯತ್ಯಾಸದಿಂದ ಕ್ರೋಡೀಕೃತವಾದ ಕೊಬ್ಬು) ಇವು ಯಕೃತ್‌ವಿನ ಅನಾರೋಗ್ಯಕ್ಕಿರುವ ಸಾಮಾನ್ಯ ಕಾರಣಗಳು.

## ಇದರಿಂದೇನಾದರೂ ಅಪಾಯವಿದೆಯೇ?

ಬೊಜ್ಜು, ಮಧುಮೇಹ, ಅತಿಯಾದ ಕೊಬ್ಬು ಹೀಗೆ ಜೀವನ ಶೈಲಿಗೆ ಸಂಬಂಧಿಸಿದ ಅನಾರೋಗ್ಯಗಳಿಂದಲೇ ಜನ ಹೆಚ್ಚಾಗಿ ಬಳಲುತ್ತಿದ್ದಾರೆ. ಇದು ಯಕೃತ್ ಅನಾರೋಗ್ಯದ ಅಪಾಯವನ್ನು ಹೆಚ್ಚಿಸುತ್ತದೆ. ಅತಿಯಾದ ಮದ್ಯಸೇವನೆ, ಹೆಪಟೈಟಿಸ್ ಬಿ ಮತ್ತು ಸಿ ವೈರಾಣು ಸೋಂಕಿತ ವ್ಯಕ್ತಿಗಳ ರಕ್ತ ಮತ್ತು ಶರೀರದ ದ್ರವಗಳಿಗೆ ತೆರೆದುಕೊಂಡರೆ, ರಕ್ತವರ್ಗಾವಣೆ ಮಾಡಿಸಿಕೊಂಡರೆ, ಕೆಲವೊಂದು ರಾಸಾಯನಿಕಗಳಿಗೆ ತೆರೆದುಕೊಂಡರೆ, ಕೆಲವು ಅನುಶಾಸಿತ ಔಷಧಗಳು ಮತ್ತು ವಿಷಗಳು ನಿಮ್ಮನ್ನು ಈ ಅಪಾಯಕ್ಕೆ ತಳ್ಳಬಹುದು.

## ಯಕೃತ್ ರೋಗದ ಗುಣಲಕ್ಷಣಗಳೇನು?

ಒಬ್ಬ ವ್ಯಕ್ತಿ ಯಕೃತ್ ರೋಗದಿಂದ ಬಳಲುತ್ತಿದ್ದರೆ ಆತನ ಕಣ್ಣುಗಳು ಹಾಗೂ ಚರ್ಮ ಹಳದಿ ಬಣ್ಣಕ್ಕೆ ತಿರುಗುತ್ತವೆ. ಜಾಂಡೀಸ್ ಅಥವಾ ಕಾಮಾಲೆ, ಕಡುವರ್ಣದ ಮೂತ್ರವಿಸರ್ಜನೆ ಮತ್ತು ವಿವರ್ಣವಾದ ಮಲವಿಸರ್ಜನೆ ಕಂಡುಬರುತ್ತದೆ. ಕೆಲವೊಬ್ಬರಿಗೆ ಶರೀರದಾದ್ಯಂತ ನವೆ ಅಥವಾ ತುರಿಕೆಯ ಅನುಭವ ಆಗಬಹುದು. ಸುಸ್ತು ಕಾಡಬಹುದು ಮತ್ತು ಹಸಿವು ಆಗದೇ ಇರಬಹುದು. ಒಂದೊಮ್ಮೆ ನಿಮಗೆ ಅಥವಾ ನಿಮ್ಮ ಪರಿಚಿತರು ಯಾರಿಗೇ ಆದರೂ ಇಂತಹ ಗುಣಲಕ್ಷಣಗಳ ಕಂಡುಬಂದರೆ, ಕೂಡಲೇ ಯಕೃತ್ ತಜ್ಞ ವೈದ್ಯರನ್ನು ಭೇಟಿಯಾಗಬೇಕು ಎಂಬುದು ನಾವು ನೀಡುವ ಸಲಹೆ.

## ಯಕೃತ್ ರೋಗ ಪತ್ತೆ ಹೇಗೆ?

ಹಲವು ರೀತಿಯ ಪರೀಕ್ಷೆಗಳ ಮೂಲಕ ಯಕೃತ್ ರೋಗವನ್ನು ಪತ್ತೆಹಚ್ಚಬಹುದು. ಸಾಮಾನ್ಯವಾಗಿ ಯಕೃತ್ ಕೆಲಸದಪರೀಕ್ಷೆಗೆ ಅಲ್ಟ್ರಾಸೌಂಡ್ ಅಥವಾ ಸಿಟಿ ಸ್ಕ್ಯಾನ್ ಇಮೇಜಿಂಗ್ ನಡೆಸಲಾಗುತ್ತದೆ. ಯಕೃತ್ ರೋಗದ ಮಾದರಿ ಪತ್ತೆಗಾಗಿ ಕೆಲವೊಂದು ಪ್ರಕರಣಗಳಲ್ಲಿ ಲಿವರ್ ಬಯೋಪ್ಸಿ (ಅರ್ಥಾತ್ ಯಕೃತ್‌ವಿನ ಜೀವಕೋಶದ ಪರೀಕ್ಷೆ) ನಡೆಸಬೇಕಾಗಿ ಬರಬಹುದು.

## ರೋಗ ತಡೆಯುವುದಕ್ಕೇನಾದರೂ ದಾರಿ ಇದೆಯೇ?

ಯಕೃತ್ ರೋಗ ತಡೆಯುವುದಕ್ಕೆ ಇರುವ ಒಂದೇ ದಾರಿ ಎಂದರೆ ಆರೋಗ್ಯ ಪೂರ್ಣ ಜೀವನಶೈಲಿ ಅನುಸರಿಸುವುದು – ಅಂದರೆ, ಮೇಲೆ ಹೇಳಿದ ಅಪಾಯಕಾರಿ ಜೀವನಶೈಲಿಯನ್ನು ಅನುಸರಿಸದೇ ಇರುವಂಥದ್ದು. ಅಲ್ಲದೇ, ವೈರಾಣು ಹೆಪಟೈಟಿಸ್ ವಿರುದ್ಧ ನೀವು ಹಾಗೂ ನಿಮ್ಮ ಪ್ರೀತಿಪಾತ್ರರು ರೋಗನಿರೋಧಕ ಲಸಿಕೆ / ಚುಚ್ಚುಮದ್ದು ಹಾಕಿಸಿಕೊಳ್ಳಬೇಕು. ಹೀಗೆ ಮಾಡುವುದರಿಂದ ನೀವು ಹೆಪಟೈಟಿಸ್ ಬಿ ಮತ್ತು ಸಿ ಇಂದ ಉಂಟಾಗಬಹುದಾದ ಯಕೃತ್ ರೋಗದಿಂದ ರಕ್ಷಣೆ ಪಡೆಯಬಹುದು.

## ಯಕೃತ್ ರೋಗವನ್ನು ಗುಣಪಡಿಸಬಹುದೇ?

ಆರಂಭಿಕ ಹಂತದಲ್ಲೇ ರೋಗ ಪತ್ತೆಹಚ್ಚುವುದೇ ಚಿಕಿತ್ಸೆಯ ಯಶಸ್ಸಿನ ಪ್ರಮುಖ ಸೂತ್ರ. ಬಹುತೇಕ ಯಕೃತ್ ರೋಗಗಳ ಪ್ರಕರಣಗಳಲ್ಲಿ, ಆರಂಭಿಕ ಹಂತದಲ್ಲೇ ರೋಗ ಪತ್ತೆಯಾಗಿರುವ ಕಾರಣ ಅದನ್ನು ಔಷಧೋಪಚಾರ ಗಳ ಮೂಲಕ ಹಾಗೂ ಜೀವನಶೈಲಿ ಸುಧಾರಿಸುವ ಮೂಲಕ ನಿಯಂತ್ರಿಸಬಹುದು. ಆದಾಗ್ಯೂ, ಒಮ್ಮ ಯಕೃತುವಿಗೆ ಗರಿಷ್ಠ ಪ್ರಮಾಣದ ಹಾನಿ ಉಂಟಾದರೆ ಕೊನೆಯ ಆಯ್ಕೆ ಯಕೃತ್ ಕಸಿ ಮಾಡುವುದಷ್ಟೇ ಉಳಿದಿರುತ್ತದೆ.

ನಿಮ್ಮ ಯಕೃತ್‌ವಿಗೆ ಅಗತ್ಯ ಸಂರಕ್ಷಣೆಯನ್ನು ನೀಡಿ. ಅದಕ್ಕಾಗಿ ಬೆಂಗಳೂರಿನ ವಿಕ್ರಮ್ ಆಸ್ಪತ್ರೆಯ ಲಿವರ್ ಕ್ಲಿನಿಕ್‌ಗೆ ಭೇಟಿಕೊಡಿ. ಇಲ್ಲಿ ನೀವು ತಜ್ಞ ವೈದ್ಯರ ತಂಡದ ಜೊತೆ ಸಮಾಲೋಚಿಸಬಹುದು, ಸಿಬಿಸಿ, ಆರ್‌ಬಿಎಸ್, ಎಚ್‌ಬಿಎಸ್‌ಎಜಿ(ರ್‍ಯಾಪಿಡ್), ಯುಎಸ್‌ಜಿ ಅಬ್ಡೊಮನ್, ಲಿಪಿಡ್ ಪ್ರೊಫೈಲ್, ಆ್ಯಂಟಿ ಎಚ್‌ಸಿವಿ(ರ್‍ಯಾಪಿಡ್), ಎತ್ತರ, ತೂಕ, ಬಿಎಂಐ, ಜಠರ–ಕರಳು ಶಾಸ್ತ್ರ ತಜ್ಞ ವೈದ್ಯರ ಜತೆಗಿನ ಸಮಾಲೋಚನೆಗಳನ್ನೊಳಗೊಂಡ "ಹೆಲ್ದಿ ಲಿವರ್ ಪ್ಯಾಕೇಜ್"ನ ಪ್ರಯೋಜನವನ್ನು ಕೇವಲ 2000 ರೂಪಾಯಿ ದರದಲ್ಲಿ ಪಡೆಯಬಹುದು. ಈ ಸೌಲಭ್ಯ 25ನೇ ಜನವರಿ ಯಿಂದ 30ನೇ ಜನವರಿಯ ವರಿಗೆ ಅನ್ವಯಿಸುತ್ತದೆ.

**ಹೆಸರು ನೋಂದಾಯಿಸಲು ಹಾಗೂ ಹೆಚ್ಚಿನ ಮಾಹಿತಿಗೆ 9900014825 ಸಂಖ್ಯೆಗೆ ಕರೆ ಮಾಡಿ.**

**ವಿಕ್ರಂ ಹಾಸ್ಪಿಟಲ್ (ಬೆಂಗಳೂರು) ಪ್ರೈ. ಲಿ.**
**71/1, ಮಿಲ್ಲರ್ಸ್ ರಸ್ತೆ, ಸೇಂಟ್ ಆ್ಯನ್ಸ್ ಕಾಲೇಜು ಎದುರು,**
**ಬೆಂಗಳೂರು. ಫೋನ್: 080-7100-4500**
**www.vikramhospital.com**

VIKRAM HOSPITAL Bengaluru